ರಾಜ್ಯದಲ್ಲಿ ಹೊ'ಗ ಬಾರ್‌ಗಳ ಮಂಜೂರಾತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 135(425)

ಸದಸ್ಯರ ಹೆಸರು ಶ್ರೀ ಕಟ್ಟೀಮನಿ ಮನೋಹರ ಶಿವಪುತ್ರ(ಚಿಕ್ಕೋಡಿ)

ಉತ್ತರಿಸುವ ಸಚಿವರು ಶ್ರೀ ಎಂ ಎಂ ನಾಣಯ್ಯ(ಅಬಕಾರಿ ರಾಜ್ಯ ಸಚಿವರು)

ಪ್ರಶ್ನೆ

ಅ) ಹೊಸ ಬಾರ್‌ಗಳನ್ನು ಮಂಜೂರು ಮಾಡುವಾಗ ಮೀಸಲಾತಿ ವಧ್ಧತಿಯನ್ನು ಅನುಸರಿಸಲಾಗುವುದೇ?

ಹಾಗಿದ್ದಲ್ಲಿ ಯಾ:ಾಗಿನಿಂದ ಅನುಸರಿಸಲಾಗುವುದು?

ಆ) ನಕಲಿ ಮದ್ಯವನ್ನು ತಯಾರಿಸುವ ಒಷ್ಟು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ?

ಅಂತಹವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗುವುದು?

ಉತ್ತರ

ಅ) ಅಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ

ಉದ್ಭವಿಸುವುದಿಲ್ಲ

ಆ) 2001-200'ನೇ ಸಾಲಿನಲ್ಲಿ ಕಾನೂನು ಬಾಹಿರವಾಗಿ ಮದ್ಯಗಳನ್ನು ಮಾರಾಟ ಮಾಡುತ್ತಿದ್ದ 12,588 ಪ್ರಕರಣಗಳು ಗಮನಕ್ಕೆ ಬಂದಿರುತ್ತದೆ

ಇಂತಹ ಪ್ರಕರ'ಗಳು ಪತ್ತೆಯಾದಾಗಲೆಲ್ಲಾ ಕಾನೂನಿನ ಪ್ರಕಾರ ಕ್ರಮ ಜರುಗಿಸಲಾಗುತ್ತಿದೆ

ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯಲ್ಲಿನ ನಾರಾಯಿ ಗುತ್ತಿಗೆದಾರರ ಕುರಿತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 136(20)

ಶ್ರೀ ಕೃಷ್ಣಪ್ಪ ವಿ (ದೊಡ್ಡಬಳ್ಳಾಪುರ)

ಉತ್ತರಿಸುವ ಸಚಿವರು ಶ್ರೀ ಎಂಎಂ ನಾಣಯ್ಯ(ಅಬಕಾರಿ ರಾಜ್ಯ ಸಚಿವರು)

ಪ್ರಶ್ನೆ

ಅ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯಲ್ಲಿನ ಸಾರಾಯಿ ಗುತ್ತಿಗೆದಾರರು ಯಾರು ಯಾರು?

ಆ ಸಾರಾಯಿ ಮಾರಾಟ ಮಾಡಲು ಸಬ್ ಏಜೆನ್ಸಿಗಳನ್ನು ನೇಮಿಸುವ ಕ್ರಮವೇನು? (ನಿಯಮಾವಳಿಗಳನ್ನು ನಮೂದಿಸುವುದು)

ಇ ಸಬ್ ಏಜೆನ್ಸಿಗಳಲ್ಲದೇ ಇತರರು ಯಾವುದೇ ಅನುಮತಿಯನ್ನು ಪಡೆಯದೇ ಸಾರಾಯಿ ಮಾರಾಟವನ್ನು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹಾಗಿದ್ದಲ್ಲಿ ಅವರ ವಿರುದ್ಧ ಕೈಗೊಂಡ ಕ್ರಮಗಳಾವುವು?

ಉತ್ತರ

ಅ	ಕ್ರ ಸಂ	ಜಿಲ್ಲೆ ತಾಲ್ಲೂಕು	ಗುತ್ತಿಗೆದಾರರ ಹೆಸರು
	1	ಬೆಂಗಳೂರು(ನ) ಜಿಲ್ಲೆ	ಶ್ರೀ ವೆದ್ದಹುನೇನಪ್ಪ
		ಬೆಂಗಳೂರು(ಗ್ರಾ) ಜಿಲ್ಲೆ	
	1	ರಾಮನಗರ ತಾ	ಶ್ರೀ ಕೆ ಸಿ ಗೋವಿಂದರಾಜು
	2	ಚನ್ನಪಟ್ಟಣ ತಾ	ಶ್ರೀ ಕೆ ಸಿ ಗೋವಿಂದರಾಜು
	3	ಕನಕಪುರ ತಾ	ಶ್ರೀ ಹೆಚ್ ವಿ ಸೋಮಶೇಖರ್
	4	ದೊಡ್ಡಬಳ್ಳಾಪುರ ತಾ	ಶ್ರೀ ಹೆಚ್ ವಿ ಸೋಮಶೇಖರ್
	5	ಮಾಗಡಿ ತಾ	ಶ್ರೀ ಕೆ ಸಿ ಗೋವಿಂದರಾಜು
	6	ನೆಲಮಂಗಲ ತಾ	ಶ್ರೀ ಹೆಚ್ ವಿ ಸೋಮಶೇಖರ್

7	ದೇವನಹಳ್ಳಿ ತಾ	ಶ್ರೀ ವಿ ಕುಮಾರಸ್ವಾಮಿ
8	ಹೊಸಕೋಟೆ ತಾ	ಶ್ರೀ ಡಿ ಪುಟ್ಟಸ್ವಾಮಿ

ಆ ಅಬಕಾರಿ ಕಾಯ್ದೆ 1965ರ ಕಲಂ 17(2)ರ ಅಡಿಯಲ್ಲಿ ಜಿಲ್ಲಾಧಿಕಾರಿಗಳು ಗುತ್ತಿಗೆದಾರರ ಅರ್ಜಿಯ ಆಧಾರದ ಮೇಲೆ ಅನುಮೋದಿಸುವ ಉಪ ಗುತ್ತಿಗೆದಾರರಿಗೆ ಸನ್ನದು ನೀಡಲು ಅವಕಾಶವಿದೆ

ಇ ಇಲ್ಲ

ಉದ್ಭವಿಸುವುದಿಲ್ಲ

ಅಬಕಾರಿ ಗುತ್ತಿಗೆದಾರರು ನೀಡಿದ ಬ್ಯಾಂಕ್ ಗ್ಯಾರಂಟಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 137(401)

ಸದಸ್ಯರ ಹೆಸರು ಶ್ರೀ ಜಯಪ್ರಕಾಶ್ ಹೆಗಡೆ ಕೆ (ಬ್ರಹ್ಮಾವರ)

ಉತ್ತರಿಸುವ ಸಚಿವರು ಶ್ರೀ ಎಂ ಎಸ್ ಸಾಣಿಯ್ಯ (ಅಬಕಾರಿ ರಾಜ್ಯ ಸಚಿವರು)

ಪ್ರಶ್ನೆ

ಅ) ರಾಜ್ಯದಲ್ಲಿರುವ 175 ತಾಲ್ಲೂಕುಗಳ ಪೈಕಿ ಅಬಕಾರಿ ಗುತ್ತಿಗೆದಾರರು ಎಷ್ಟು ತಾಲ್ಲೂಕುಗಳಲ್ಲಿ ಗುತ್ತಿಗೆಗಾಗಿ ಬ್ಯಾಂಕ್ ಗ್ಯಾರಂಟಿ ನೀಡಿರುತ್ತಾರೆ

ಎಷ್ಟು ತಾಲ್ಲೂಕುಗಳಲ್ಲಿ ಬ್ಯಾಂಕ್ ಗ್ಯಾರಂಟಿಯನ್ನು ನೀಡಲಾಗಿಲ್ಲ

ಆ) ಹೀಗೆ ಆಕ್ಷನ್‌ನಲ್ಲಿ ಅಬಕಾರಿ ಗುತ್ತಿಗೆಯನ್ನು ಪಡೆದಿದ್ದು ಬ್ಯಾಂಕ್ ಗ್ಯಾರಂಟಿ ನೀಡದೇ ಇರಲು ಕಾರಣಗಳೇನು, ಅಂತಹ ಗುತ್ತಿಗೆದಾರರ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಉತ್ತರ

ಅ) 150 ತಾಲ್ಲೂಕುಗಳಲ್ಲಿ ಬ್ಯಾಂಕ್ ಗ್ಯಾರಂಟಿಗಳನ್ನು ನೀಡಿರುತ್ತಾರೆ

25 ತಾಲ್ಲೂಕುಗಳಲ್ಲಿ ಬ್ಯಾಂಕ್ ಗ್ಯಾರಂಟಿ ನೀಡಿರುವುದಿಲ್ಲ